# ಸಂಸ್ಕೃತ

## ಸಂಸ್ಕೃತಿ-ಸಂಸ್ಕಾರಗಳಿಗಾಗಿ

ಸಂದರ್ಶನ

ಸಿವಿಲ್ ಎಂಜಿನಿಯರಿಂಗ್, ಎಂಬಿಎ ಪದವಿಯ ನಂತರ ವಿವಿಧ ಕಂಪನಿಗಳಲ್ಲಿ ಕಾರ್ಯಾನುಭವ ಪಡೆದವರು **ವೆಂಕಟಸುಬ್ರಮಣಿಯನ್**. ಸಂಸ್ಕೃತ-ಸಂಸ್ಕೃತಿ ಪ್ರಚಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳಬೇಕೆಂಬ ಕಾಳಜಿಯಿಂದ ಐಡಿಯಾ ಸಾಫ್ಟ್‌ವೇರ್‌ಕಂಪನಿಯ ಡೈರೆಕ್ಟರ್ ಹುದ್ದೆ ತ್ಯಜಿಸಿ ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಶನ್ ಸಂಸ್ಥೆ ಸ್ಥಾಪಿಸಿ ಸಹಸ್ರಾರು ಜನರನ್ನು ಸಂಸ್ಕೃತದೆಡೆಗೆ ಆಕರ್ಷಿಸಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಕಾರ ನೀಡುವ ಸಲುವಾಗಿ ಆಪತ್ ಸಹಾಯ ಫೌಂಡೇಶನ್ ಮೂಲಕವೂ ಆಸಕ್ತರೊಡಗೂಡಿ ಪ್ರಯತ್ನಿಸುತ್ತಿದ್ದಾರೆ.



**ವ್ಯೋಮ ಸಂಸ್ಥೆಯ ಧ್ಯೇಯೋದ್ದೇಶಗಳೇನು ?**

ಜಗತ್ತಿನ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸಂಸ್ಕೃತ-ಸಂಸ್ಕೃತಿ-ಸಂಸ್ಕಾರದ ಅರಿವು ಮೂಡಿಸುವುದು, ಅದರ ಮೂಲಕ ಅವರಲ್ಲಿ ಒಂದು ಸತ್ಪರಿವರ್ತನೆಯನ್ನು ತರುವುದು ವ್ಯೋಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ.

**ಸಂಸ್ಕೃತ-ಸಂಸ್ಕೃತಿ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ಇತರ ಸಂಸ್ಥೆಗಳಿಗೂ, ನಿಮ್ಮ ಸಂಸ್ಥೆಗೂ ಇರುವ ವ್ಯತ್ಯಾಸವೇನು ?**

ಸಂಸ್ಕೃತವೆಂದರೆ ಕೇವಲ ಭಾಷೆಯಲ್ಲ, ಅದು, ಜ್ಞಾನಪರಂಪರೆಯ ಕೀಲಿಕೈ. ಈ ವಿಷಯದ ಬಗ್ಗೆ ಎಲ್ಲರಿಗೂಅರಿವು ಮೂಡಿಸುವುದರಲ್ಲಿ ವ್ಯೋಮ ಸಂಸ್ಥೆಯು ತನ್ನ ಕಾರ್ಯಗಳನ್ನು ತೊಡಗಿಸಿಕೊಂಡಿದೆ. ಈ ಸಂಸ್ಥೆಯು ಸಂಸ್ಕೃತವೆಂಬ ತಾಯಿಬೇರನ್ನು ಆಧಾರವಾಗಿಟ್ಟುಕೊಂಡು, ತಂತ್ರಜ್ಞಾನದ ಮೂಲಕ ಸಂಸ್ಕೃತಿ ಮತ್ತು ಸಂಸ್ಕಾರದ ರಕ್ಷಣೆ ಹಾಗು ಪೋಷಣೆಯ ಕಾರ್ಯದಲ್ಲಿ ತೊಡಗಿದೆ.

ನಾವು ಇತಿಹಾಸವನ್ನು ಪರಿಗಣಿಸಿದರೆ, ಕಳೆದ ಶತಮಾನಗಳಲ್ಲಿ ಮುಖ್ಯವಾಗಿ ಹಲವಾರು ಕ್ರಾಂತಿಗಳು ನಡೆದಿವೆ – ಉದಾಹರಣೆಗೆ ಬಡತನ ನಿವಾರಣಾ ಕ್ರಾಂತಿ, ಆಹಾರ ಕ್ರಾಂತಿ, ಮಾನವಹಕ್ಕುಗಳ ಕ್ರಾಂತಿ, ಕೈಗಾರಿಕಾ ಕ್ರಾಂತಿ, ಇತ್ಯಾದಿ. ಈ ಮೂಲಕ ರೋಟಿ-ಕಪಡಾ-ಮಕಾನ್' ಎಂಬ ಮೂಲಭೂತ ಸೌಕರ್ಯಗಳು ಲಭಿಸಿದವು. ಇಂದಿನ ಈ ಶತಮಾನದ ಕ್ರಾಂತಿಯೆಂದರೆ – ಅದು ಸಾಂಸ್ಕೃತಿಕ ಕ್ರಾಂತಿ. ಇಂದಿನ ಸಮಾಜದಲ್ಲಿ ನಾವು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಅಹಂಕಾರ, ಆಲಸ್ಯ, ಸ್ವಾರ್ಥ, ಮೊದಲಾದ ತಾಮಸ ರಾಜಸ ಗುಣಗಳಿಂದ ಕೂಡಿದ ಜನರೊಡನೆ ಜೀವಿಸುತ್ತಿದ್ದೇವೆ. ಇದರಿಂದ ಯುವಪೀಳಿಗೆಯಲ್ಲಿ ಏಕಾಗ್ರತಾಕೊರತೆ, ಕ್ಷೀಣವಾದ ನೆನಪಿನ ಶಕ್ತಿ, ಕ್ರೌರ್ಯ, ಖಿನ್ನತೆ, ಆತ್ಮಹತ್ಯಾಪ್ರವೃತ್ತಿ, ಚೌರ್ಯಪ್ರವೃತ್ತಿ, ಭ್ರಷ್ಟಾಚಾರ, ಮಾನಸಿಕ ಅನಾರೋಗ್ಯ, ಸಮಾಜವಿರೋಧಿ ಶಕ್ತಿಗಳ ಸಹವಾಸ ಮುಂತಾದ ಸಮಸ್ಯೆಗಳು ಎದುರಾಗಿವೆ.

ಈ ಮೇಲೆ ಹೇಳಿದ ಸಮಸ್ಯೆಗಳಿಗೆ ಯೋಗ, ಧ್ಯಾನ, ಆಯುರ್ವೇದ, ಮೊದಲಾದ ಪರಿಹಾರಗಳು ಲಭ್ಯವಾಗಿವೆ. ಈ ಎಲ್ಲಾ ಪರಿಹಾರಗಳ ಮೂಲ ಸಂಸ್ಕೃತ. ಸಂಸ್ಕೃತಿ-ಸಂಸ್ಕಾರಗಳ ಚಟುವಟಿಕೆಗಳಲ್ಲಿ ತೊಡಗುವುದರಿಂದ ಶಾಂತಿ, ನೆಮ್ಮದಿ, ಆರೋಗ್ಯ, ಸಹೃದಯತೆ, ಸಹನಶೀಲತೆ, ಮೊದಲಾದ ಸಮಾಜದಲ್ಲಿ ಜೀವಿಸಲು ಬೇಕಾದ ಸಂಗತಿಗಳನ್ನು ವರ್ಧಿಸಿ ಕೊಳ್ಳಬಹುದು. ಈ ಎಲ್ಲಾ ಸಂಸ್ಕೃತಿ-ಸಂಸ್ಕಾರಗಳ ಆಧಾರ ಸಂಸ್ಕೃತ. ಈ ರೀತಿಯಲ್ಲಿ, ಇಂದು ನಾವು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ಅದರ ಮೂಲದಲ್ಲೇ ಪರಿಹರಿಸಬೇಕೆಂದರೆ ಅದು ಸಂಸ್ಕೃತದಿಂದಲೇ ಸಾಧ್ಯ. ಹಾಗಾಗಿ, ನಾವು ಸಂಸ್ಕೃತವನ್ನು ರಕ್ಷಿಸಿದರೆ, ಅದು ನಮ್ಮ ಮುಂದಿನ ತಲೆಮಾರುಗಳನ್ನೂ ರಕ್ಷಿಸುತ್ತದೆ.

**ವ್ಯೋಮ ಸ್ಥಾಪಿಸಲು ಮುಖ್ಯ ಕಾರಣಗಳೇನು ?**

ದೇಶದಲ್ಲಿ ಸಂಸ್ಕೃತಾಧ್ಯಯನವು ಎರಡು ರೀತಿಯಾಗಿ ನಡೆದುಬರುತ್ತಿದೆ. ಔಪಚಾರಿಕ ಹಾಗು ಅನೌಪಚಾರಿಕ ಶಿಕ್ಷಣಗಳ ಮುಖಾಂತರ. ಔಪಚಾರಿಕವೆಂದರೆ – ವಿಶ್ವವಿದ್ಯಾಲಯಗಳಲ್ಲಿ, ಗುರುಕುಲಗಳಲ್ಲಿ, ಇತ್ಯಾದಿ ವಿದ್ಯಾಸಂಸ್ಥೆಗಳಲ್ಲಿ ಪ್ರಚಲಿತವಾಗಿರುವುದು. ಅನೌಪಚಾರಿಕವು ಎರಡು ಬಗೆಯಾಗಿದೆ – ಪ್ರತ್ಯಕ್ಷ (ನೇರವಾಗಿ ಗುರುವಿನಿಂದ ಕಲಿಯುವುದು), ಪರೋಕ್ಷ (ತಂತ್ರಜ್ಞಾನದ ಮುಖಾಂತರ, ದೂರಶಿಕ್ಷಣ ಇತ್ಯಾದಿ). ವ್ಯೋಮ, ಈ ಅನೌಪಚಾರಿಕಶಿಕ್ಷಣವನ್ನು ಸಫಲಗೊಳಿಸುವತ್ತ ಕಾರ್ಯಮಾಡುತ್ತಿದೆ. ಮುಖ್ಯವಾದ ಮೂರು ಕಾರಣಗಳು ಹೀಗಿವೆ:

1. ಸಂಸ್ಕೃತವನ್ನು ಯಾಕೆ ಓದಬೇಕು ಎನ್ನುವ ಪ್ರಶ್ನೆಯನ್ನು




ರಘುನಂದನ್. ಆರ್
ಸಾಫ್ಟ್‌ವೇರ್ ತಂತ್ರಜ್ಞ

ಬಿಟ್ಟು, ಸಂಸ್ಕೃತವನ್ನು ಹೇಗೆ ಕಲಿಸುವುದು ಎನ್ನುವ ಅಂಶಕ್ಕೆ ಹೆಚ್ಚು ಆದ್ಯತೆ ಕೊಡಲು ವ್ಯೋಮ ಪ್ರಯತ್ನಿಸುತ್ತಿದೆ. ಆಕರ್ಷಕವಾಗಿ, ಆಳವಾಗಿ, ಮನಮುಟ್ಟುವಂತೆ ಕಲಿಸುವುದೇ ಮುಖ್ಯ ಉದ್ದೇಶ. ಬಾಲಕರಲ್ಲಿ ಕ್ರಿಯಾಕಲಾಪಗಳ ಮೂಲಕ ಭಾಷಾಧ್ಯಯನವನ್ನು ಸ್ವಯಂಪ್ರೇರಣೆಯಿಂದ ಕಲಿಯುವಂತೆ ಮಾಡುವುದು, ಹೆಚ್ಚಿನ ಅಧ್ಯಯನ ಮಾಡಲು ಅವಕಾಶ ಕಲ್ಪಿಸುವುದು.

2. ಕೌಶಲಾಧಾರಿತ ಅಧ್ಯಯನ – ಒಂದು ಭಾಷೆಯಲ್ಲಿ ಪ್ರಾವಿಣ್ಯತೆಯನ್ನು ಪಡೆಯಬೇಕೆಂದರೆ – ಶ್ರವಣ, ಅವಗಮನ, ಸಂಭಾಷಣ, ಪಠನ, ಲೇಖನ ಕೌಶಲಗಳು ಅತ್ಯಗತ್ಯ. ಕೌಶಲಾಧಾರಿತ ಸಂಸ್ಕೃತದ ಅಧ್ಯಯನವನ್ನು ಕಲ್ಪಿಸಿ, ಇದರಿಂದ ವಿದ್ಯಾರ್ಥಿಗಳಲ್ಲಿ ಪ್ರಾವೀಣ್ಯತೆಯನ್ನು ಉಂಟುಮಾಡಿ, ಯಾವುದೇ ಕ್ಷೇತ್ರದಲ್ಲಿ ಪಾಂಡಿತ್ಯವನ್ನು ಪಡೆಯಲು ಸಿದ್ಧತೆಯನ್ನು ಅವರಲ್ಲಿ ಕಲ್ಪಿಸುವುದು.

3. ಶಾಸ್ತ್ರಸಂರಕ್ಷಣೆ – ಶಾಸ್ತ್ರಾಧ್ಯಯನ ಮಾಡಬಯಸುವ ಆಸಕ್ತರಿಗೆ ಗುರುಗಳು ದೊರಕದೇ ಇರುವುದು, ಅಧ್ಯಾಪನ ಮಾಡಬಯಸುವ ವಿದ್ವಾಂಸರಿಗೆ ಶ್ರದ್ಧಾಳು ವಿದ್ಯಾರ್ಥಿಗಳು ದೊರಕದೇ ಇರುವುದು ಇಂದು ಸಾಮಾನ್ಯವಾಗಿದೆ. ಶಾಸ್ತ್ರಶಿರೋಮಣಿಗಳು, ಪ್ರಕಾಂಡ ಪಂಡಿತರು ಅತ್ಯಂತ ವಿರಳ, ಹಾಗು ದೇಶದ ನಾನಾಭಾಗಗಳಲ್ಲಿ ವಾಸವಾಗಿದ್ದಾರೆ. ಅತ್ಯಂತ ಶ್ರದ್ಧೆಯಿಂದ ಅಧ್ಯಯನ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳು ಇಂತಹ ಶ್ರೇಷ್ಠ ಗುರುಗಳಲ್ಲಿ ಅಧ್ಯಯನ ಮಾಡುವ ಭಾಗ್ಯದಿಂದ ವಂಚಿತರಾಗಿದ್ದಾರೆ. ಈ ಕೊರತೆಯನ್ನು ಆಧುನಿಕ ತಂತ್ರಾಂಶಗಳಿಂದ ಮಾತ್ರ ನೀಗಿಸಬಹುದು. ಹೀಗೆ ನಮ್ಮ ಸನಾತನ ಜ್ಞಾನಪರಂಪರೆಯನ್ನು ಅರಿಯಲು ವ್ಯಾಕರಣಶಾಸ್ತ್ರ ತರ್ಕಶಾಸ್ತ್ರ ಮುಂತಾದ ಆಳವಾದ ವಿಚಾರಗಳ ಅಧ್ಯಯನಕ್ಕೆ ದಾರಿಮಾಡಿಕೊಡುವುದೇ ಅಂತಿಮ ಗುರಿ. ಈ ನಿಟ್ಟಿನಲ್ಲಿ ವ್ಯೋಮ ಕಾರ್ಯಮಾಡುತ್ತಿದೆ.

ಲೌಕಿಕವಿದ್ಯೆಯನ್ನು ಪಡೆದಿರುವ ಅದೆಷ್ಟೋ ಜನರು ಅಧ್ಯಾತ್ಮವಿದ್ಯೆಯನ್ನು, ಸಂಸ್ಕೃತವನ್ನು ಅಧ್ಯಯನ ಮಾಡಲು ಹಂಬಲಿಸುತ್ತಿದ್ದಾರೆ. ಅವರೆಲ್ಲರಿಗೂ ಶಾಸ್ತ್ರಾಧ್ಯಯನದ ಸೌಲಭ್ಯ ಒದಗಿಸುವುದೇ ವ್ಯೋಮ ಸ್ಥಾಪಿಸುವಲ್ಲಿ ಪ್ರೇರಕಶಕ್ತಿಯಾಗಿದೆ.

**ವ್ಯೋಮ-ದ್ವಾರಾ, ಹೇಗೆ ಸಂಸ್ಕೃತಾಧ್ಯಯನವನ್ನು ಮಾಡಬಹುದು ?**

ವ್ಯೋಮ–ಮುಖಾಂತರ, ಇಂದು ಯಾರಾದರೂ, ಜಗತ್ತಿನಲ್ಲಿ ಯಾವ ಮೂಲೆಯಿಂದಾದರೂ ಸಂಸ್ಕೃತವನ್ನು ಅಂತರ್ಜಾಲದ ಸಹಾಯದಿಂದ, ಸ್ವಯಂಗತಿಯಲ್ಲಿ, ಸೌಕರ್ಯವಾದ ಸಮಯದಲ್ಲಿ ಕಲಿಯಬಹುದು. ಈ ಜಾಲಪುಟದಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು www.sanskritfromhome.in

ಹಾಗೆಯೇ ಅಧ್ಯೇತೃವಿನ ಅಗತ್ಯಕ್ಕೆ ಅನುಗುಣವಾಗಿ ಪಾಠ್ಯಕ್ರಮವನ್ನು ಜೋಡಿಸಿಕೊಡುವ ಮೂಲಕ, ಅಧ್ಯಯನ ಗುರಿಯನ್ನು ಸುಲಭವಾಗಿ ತಲುಪಲು ಮಾರ್ಗದರ್ಶನ ನೀಡುತ್ತೇವೆ. ಹೆಚ್ಚಿನ ಮಾಹಿತಿಯನ್ನು ಇಲ್ಲಿ ಪಡೆಯಬಹುದು www.digitalsanskritguru.com.

ಈಗಾಗಲೇ, 17 ಉಚಿತ ತರಗತಿಗಳು, 600ಕ್ಕೂ ಹೆಚ್ಚು ಪಾಠಗಳು, 400ಕ್ಕೂ ಹೆಚ್ಚು ವೀಡಿಯೋಗಳು ಪ್ರಗತ ಶಿಕ್ಷಣವನ್ನು ಪಡೆಯಲು ಸುಲಭಸಾಧನಗಳಾಗಿವೆ.

ಇದಷ್ಟೇ ಅಲ್ಲದೆ, ಸ್ಮಾರ್ಟ್–ಫೋನ್ ನಲ್ಲಿಯೇ ಸಂಸ್ಕೃತವನ್ನು ಕಲಿಯಲು ಆನ್ಡ್ರಾಯ್ಡ್ ಹಾಗು ಆಪಲ್ ತಂತ್ರಾಂಶಗಳಲ್ಲಿ 16ಕ್ಕೂ ಹೆಚ್ಚು ಉಚಿತ ಆಪ್‌ಗಳ ಸಹಾಯದಿಂದ ಸಾಧ್ಯವಾಗಿದೆ.

**ನೀವು ವ್ಯೋಮ ಸ್ಥಾಪಿಸಿ 4 ವರ್ಷಗಳಾಗಿವೆ. ಇಷ್ಟು ಸಮಯದಲ್ಲಿ ಎಷ್ಟು ಜನರನ್ನು ತಲುಪಲು ಸಾಧ್ಯವಾಗಿದೆ ?**

ವಿವಿಧ ಮಾಧ್ಯಮಗಳಿಂದ ವ್ಯೋಮ ಸುಮಾರು 45 ಸಾವಿರಕ್ಕೂ ಹೆಚ್ಚು ಜನರನ್ನು ತಲುಪುವಲ್ಲಿ ಯಶಸ್ವಿಯಾಗಿದೆ. ಮೂರು ಸಾವಿರಕ್ಕೂ ಹೆಚ್ಚು ಜನರು ಇ–ಕಲಿಕೆಯಿಂದ ಉಪಯೋಗ ಪಡೆಯುತ್ತಿದ್ದಾರೆ. 20 ಸಾವಿರಕ್ಕೂ ಹೆಚ್ಚು ಜನರು ಆಪ್ ಗಳ ಮೂಲಕ ಸಂಸ್ಕೃತಾಧ್ಯಯನದಲ್ಲಿ ತೊಡಗಿದ್ದಾರೆ. ಕೇವಲ ಬಾಲಾಮೋದಿನೀ ಎಂಬ ಸಿ.ಡಿ.ಯನ್ನು ನಾಲ್ಕು ಸಾವಿರಕ್ಕೂ ಹೆಚ್ಚು ಜನರು ಖರೀದಿಸಿ, ಅದರಿಂದ ಸಂಸ್ಕೃತವನ್ನು ಕಲಿಯುವುದರ ಮೂಲಕ ಅತ್ಯಂತ ಸಂತಸವನ್ನು ಪಟ್ಟಿದ್ದಾರೆ, ಹಾಗೂ ನಮ್ಮನ್ನು ಹರಸಿದ್ದಾರೆ.

**ಮುಂದಿನ ದಾರಿ ಹೇಗಿರಬಹುದು ?**

1. ವ್ಯೋಮ ಸಂಸ್ಥೆಯು ಈಗ ಪ್ರಧಾನವಾಗಿ ನಾಯಕರ ಸ್ವಯಂ ನಿಧಿಯಿಂದ ಕೆಲಸ ಮಾಡುತ್ತಿದೆ. ಆದ್ದರಿಂದ ನಮ್ಮ ಪ್ರಥಮ ಗುರಿ ಆರ್ಥಿಕ ಸ್ವಾವಲಂಬನೆ. ಈ ಮೂಲಕ ನಾವು ಎಲ್ಲರಲ್ಲೂ ಸಹಾಯವನ್ನು ಪ್ರಾರ್ಥಿಸುತ್ತಿದ್ದೇವೆ. ಈ ಒಂದು ಮಹತ್ತರ ಕಾರ್ಯದಲ್ಲಿ ಸಹಾಯದೊರಕಿದರೆ ನಾವು ಸಫಲರಾಗಬಹುದು. ಕೆಲವು ಸುಲಭ ಸೇವೆಗಳು ಹೀಗಿವೆ :

ನಮ್ಮ ಉಚಿತ ಆಪ್‌ಗಳನ್ನು ಉಪಯೋಗಿಸಿ.

ಸ್ವಯಂಪ್ರೇರಿತರಾಗಿ ನಿಮ್ಮ ಇಚ್ಛಾನುಸಾರ, ಸಮಯಾನುಸಾರ ನಮ್ಮ ಕಾರ್ಯಗಳಲ್ಲಿ ಭಾಗವಹಿಸಿ, ಸ್ವಕೌಶಲ್ಯಾಭಿವೃದ್ಧಿಯನ್ನು ಪಡೆಯಿರಿ.

ಕಾರ್ಯಕ್ರಮಗಳಲ್ಲಿ ಉಡುಗೊರೆಯಾಗಿ ಕೊಡಲು ನಮ್ಮ ಸಿ.ಡಿ.ಗಳನ್ನು ಉಪಯೋಗಿಸಿ – ಹುಟ್ಟುಹಬ್ಬ, ಉಪನಯನ, ವಿವಾಹ ಮೊದಲಾದ ಸಂದರ್ಭಗಳಲ್ಲಿ ಭಗವದ್ಗೀತಾ ಸಿ.ಡಿ.ಯನ್ನು, ಮಕ್ಕಳಿಗೆ ಶಿಶುಗೀತಾನಿ ಸಿ.ಡಿ.ಯನ್ನು, ಬಾಲಾಮೋದಿನೀ ಸಿ.ಡಿ.ಯನ್ನು ಕೊಡಬಹುದು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡಬಹುದು. ನಮ್ಮ ಚಟುವಟಿಕೆಗಳ ವಿಚಾರವನ್ನು ಆಸಕ್ತರೊಡನೆ ಹಂಚಿಕೊಳ್ಳಿ.

ನಗದು ಅಥವಾ ಬೇರೆ ರೀತಿಯಲ್ಲಿ ಸಹಾಯ ಮಾಡುವುದು.

2. ವಿಶೇಷ ಆಸಕ್ತಿ ಗಣಗಳನ್ನು ಕಲ್ಪಿಸಿ, (ಆಯುರ್ವೇದ ವೈದ್ಯರಿಗೆ, ಸಂಗೀತಜ್ಞರಿಗೆ, ಯೋಗ ಆಸಕ್ತರಿಗೆ, ಪುರೋಹಿತರಿಗೆ, ಇತ್ಯಾದಿವರ್ಗಗಳಿಗೆ) ಮೂಲಸಂಸ್ಕೃತ ಗ್ರಂಥಗಳ ಅಧ್ಯಯನಕ್ಕೆ ಸೌಕರ್ಯ ಮಾಡಿಕೊಡುವುದು. ಈ ಮೂಲಕ, ಸ್ವಕ್ಷೇತ್ರದಲ್ಲಿ ನೈಪುಣ್ಯತೆಯನ್ನು ಹೆಚ್ಚಿಸುವುದು.

3. ಶಾಲೆಗಳಲ್ಲಿ ಸಂಸ್ಕೃತಾಧಾರಿತ ಮೌಲಿಕ ಶಿಕ್ಷಣವನ್ನು ಕೊಡುವುದು.

4.ಸಮಯದೊತ್ತಡವಿರುವವರಿಗೆ ಸಂಸ್ಕೃತಿಯ ಮೂಲಕ (ರಾಮಾಯಣಾದಿ ಗ್ರಂಥಗಳಲ್ಲಿರುವ ಸಂಸ್ಕಾರಮೌಲ್ಯಗಳನ್ನು ತಿಳಿಸಿ), ಸಂಸ್ಕೃತದಲ್ಲಿ ಆಸಕ್ತಿಯನ್ನು ಮೂಡಿಸಿ, ಸಂಸ್ಕೃತವೆಂಬ ತಾಯಿಬೇರನ್ನು ಪೋಷಿಸುವುದು.

5. ಬೇರೆ ವಿಷಯಗಳ ಬೋಧನೆಗೆ ಹೇಗೆ ತಂತ್ರಾಂಶವಿದೆಯೋ, ಹಾಗೆಯೇ ಸಂಸ್ಕೃತವನ್ನು ಸೃಜನಶೀಲವಾಗಿ ಬೋಧಿಸಲು ತಂತ್ರಾಂಶವನ್ನು ಕಲ್ಪಿಸುವುದು. ಅದರ ಮೂಲಕ ಅಧ್ಯಾಪಕರ ಪ್ರಯತ್ನವನ್ನು ಪುಷ್ಟಿಗೊಳಿಸುವುದು.

**ಸಂಸ್ಥೆಯ ಮುಂದಿನ ಗುರಿಗಳೇನು ?**

ಈ ಸಂಸ್ಕೃತವೆಂಬ ಅಪೂರ್ವ ನಿಧಿಯನ್ನು ಸಂಸ್ಕೃತಿ–ಸಂಸ್ಕಾರವೆಂಬ ಒರೆಗಲ್ಲನ್ನು ಎಲ್ಲರೊಡನೆ ಹಂಚಿಕೊಳ್ಳಬೇಕೆಂಬ ಬಯಕೆ ನಮಗಿದೆ. ಗುರಿಗೆ ಒಂದು ಸಂಖ್ಯೆಬೇಕೆಂದಲ್ಲಿ ಆಪ್‌ಗಳ ಮೂಲಕ 2025 ವೇಳೆಗೆ – 5 ಲಕ್ಷ ಜನರನ್ನು,ಬೇರೆ ಪ್ರಯತ್ನಗಳ ಮೂಲಕ 10 ಲಕ್ಷ ಜನರನ್ನು ತಲುಪಬೇಕು ಎಂಬುದಾಗಿ ಸಂಕಲ್ಪ ಮಾಡಿದ್ದೇವೆ.

ನಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಾ, ಸಂಸ್ಕೃತ–ಸಂಸ್ಕೃತಿ–ಸಂಸ್ಕಾರ ಪರವಾದ ಸೇವಾವ್ರತಿಗಳನ್ನು ಒಂದುಗೂಡಿಸಿ, ಎಲ್ಲರೂ ಸಂಸ್ಕೃತಮಾತೆ, ಭಾರತಮಾತೆಯ ಸೇವೆಯಲ್ಲಿ ತೊಡಗಿ ಜೀವನವನ್ನು ಸಾರ್ಥಕಗೊಳಿಸುವಲ್ಲಿ ಪ್ರಯತ್ನ ಪಡಬೇಕೆಂಬ ಮತ್ತೊಂದು ಸಂಕಲ್ಪವಿದೆ.